ಶ್ರೀ ಕೆ. ಹೆಚ್. ಪಾಟೀಲ್.—ತಾವು ಹೇಳಿದ್ದುದು ನಿಜ. ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕಳಿಸಿದ್ದೇವೆ. ಪ್ರಿಯಾಂಬಲ್ ಹೇಳುತ್ತಾರೆ, ಅದಕ್ಕೆ ಅವಕಾಶ ಕೊಡಿ. ೪–೫ ಮಿನಿಟ್ ಆಗಬಹುದು. ಆಮೇಲೆ ನೀವು ಹೇಳಿರಿ. ಮಾನ್ಯ ಅಧ್ಯಕ್ಷರು ರೂಲಿಂಗ್ ಏನು ಹೇಳುತ್ತಾರೋ ಅದನ್ನು ನಾನು ಹೇಗೆ ಹೇಳಲಿ. What ruling the Speaker will give, I don't know. But we will have to abide by the ruling of the Speaker.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಜರ್ನ್‌ಮೆಂಟ್ ಮೋಷನ್ ಪ್ರಾರಂಭ ಆದರೆ, ಇಂದೇ ಮುಗಿಯಬೇಕು. ಇವತ್ತು ಚರ್ಚೆ ಮಾಡೋಣ ಅಂದರೆ ಅದಕ್ಕೆ ನಾನು ಸಿದ್ಧನಿದ್ದೇನೆ. ನಾಳೆ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್ ಆಫ್ ಪ್ರೊಸೀಜರ್ ತಮ್ಮ ಗಮನಕ್ಕೆ ತರಬೇಕಾಗಿದೆ ರೂಲ್ ೬೩ರ ಪ್ರಕಾರ....

ಅಧ್ಯಕ್ಷರು.—ಸ್ವಲ್ಪ ತಡೆಯಿರಿ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಕರೆಕಳುಹಿಸಿದ್ದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಕಳುಹಿಸಿದ್ದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇದರ ಬಗ್ಗೆ ಒಬ್ಬರೇ ಒಬ್ಬರು ಮಾತನಾಡಿ, ಆಮೇಲೆ ಒಪ್ಪಿಕೊಂಡು, ಮುಂದೆ ಹಾಕಬೇಕೆಂಬ ಅಭಿಪ್ರಾಯಕ್ಕೆ ಬಂದಂತೆ ಕಾಣುತ್ತದೆ ಆದರೆ, ರೂಲ್ ೬೩ರ ಪ್ರಕಾರ ಹೀಗೆ ಇದೆ.

> "Provided further that where the Speaker is not in possession of full facts about the matter mentioned therein, he may before giving or refusing his consent read the notice of the motion and hear from the Minister and/or members concerned a brief statement of facts and then give his decision on the admissibility of the motion"

So, you have to hear the members concerned and then give your decision. ಇದರ ಮೇಲೆ ಡಿಸ್‌ಕಷನ್ ಮಾಡಬಹುದು ಎಂದು ಕಾಣುತ್ತದೆ.

ನಿಲುವಳಿ ಸೂಚನೆ (ಮಂಡನೆಗೆ ಅನುಮತಿ ಕೋರಿಕೆ)

ಬಗರ್ ಹುಕುಂ ಸಾಗುವಳಿಯನ್ನು ಕ್ರಮಪಡಿಸುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಒಂದು ಪ್ರಾಮುಖ್ಯವಾದಂಥ ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಇವತ್ತು ರಾಜ್ಯದಲ್ಲಿ ಅತಿವೃಷ್ಟಿಯಿಂದ ಸಾವಿರಾರು ಮನೆಗಳು ಬಿದ್ದು ಹೋಗಿ, ಲಕ್ಷಾಂತರ ಎಕರೆ ಭೂಮಿಯಲ್ಲಿರತಕ್ಕ ಬೆಳೆ ಹಾಳಾಗಿ ರೈತರಿಗೆ ತೊಂದರೆಯಾಗಿದೆ. ಎಲ್ಲಾ ವಿಷಯಗಳಿಗಿಂತ ಮುಖ್ಯವಾಗಿ ಈ ರಾಜ್ಯದ ರೈತನ ತೊಂದರೆ ಬಗ್ಗೆ ಇವತ್ತು ಇಲ್ಲಿ ಚರ್ಚೆ ಆಗಬೇಕಾಗಿದೆ. ಯಾವ ಸಮಸ್ಯೆ ಮುಖ್ಯವಾದದು ಎಂಬುದರ ಬಗ್ಗೆ ತಾವೇ ಯೋಚನೆ ಮಾಡಿ. ಅತಿವೃಷ್ಟಿಯಿಂದ ತೊಂದರೆಗೆ ಒಳಗಾದವರಿಗೆ ಇದುವರೆವಿಗೂ ಪರಿಹಾರ ಸಿಕ್ಕಿಲ್ಲ. ಇದರ ಜೊತೆಗೆ ಬಗರ್ ಹುಕುಂ ಸಾಗುವಳಿದಾರರ ಸಮಸ್ಯೆ ಕೂಡ ಇದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಸುಗ್ರೀವಾಜ್ಞೆಯನ್ನು ರಾಜ್ಯಪಾಲರಿಗೆ ಕಳುಹಿಸಿಕೊಟ್ಟು ವಾಪಸ್ಸು ತೆಗೆದುಕೊಂಡಿದ್ದಾರೆ ಇವತ್ತು ಈ ವಿಚಾರದಲ್ಲಿ ಅನೇಕ ಜಿಲ್ಲೆಗಳಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಇಂಥ ಪ್ರಾಮುಖ್ಯವಾದ ವಿಷಯಗಳಿಗೆ ಅವಕಾಶ ಕೊಡಬೇಕೇ ಹೊರತು ಬಾಕಿ ವಿಷಯಗಳಿಗೆ ಅಲ್ಲ. ಇವತ್ತು ಅತಿವೃಷ್ಟಿಯಿಂದ ಆಗಿರುವ ತೊಂದರೆಯ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ರೈತರಿಗೆ ಸಂಬಂಧಪಟ್ಟ ಹಾಗೂ ಬಗರ್‌ಹುಕುಂ ಸಾಗುವಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಪ್ರಾಮುಖ್ಯತೆ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಟೆಲಿಫೋನ್ ಹಗರಣ ಮುಖ್ಯವಲ್ಲ. ರೈತರ ಮತ್ತು ಬಗರ್ ಹುಕುಂ ಸಾಗುವಳಿದಾರರ ವಿಷಯವನ್ನು ಮೊದಲು ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಮೆಮೋರಂಡಂ ಕಾಪಿಯನ್ನು ಎಲ್ಲಾ ಸದಸ್ಯರುಗಳಿಗೂ ಹಂಚುತ್ತೇವೆ. ಆದರಲ್ಲಿ ಎಲ್ಲಾ ತಾಲ್ಲೂಕುಗಳ ಮತ್ತು ಜಿಲ್ಲೆಗಳ ಮಾಹಿತಿ ಇದೆ. ಈ ವಿಚಾರವನ್ನು ನಾಳೆಗೆ ತೆಗೆದುಕೊಂಡರೆ ಒಳ್ಳೆಯದು. ಇನ್ನು ಬಗರ್‌ಹುಕುಂ ಸಾಗುವಳಿದಾರರಿಗೆ ಸಂಬಂಧಪಟ್ಟಂತೆ ಲ್ಯಾಂಡ್ ರೆವಿನ್ಯೂ ಆಕ್ಟ್ ವಿಚಾರದಲ್ಲಿ ನಾಳೆ ವಿರೋಧ ಪಕ್ಷಗಳ ಲೀಡರುಗಳ ಜೊತೆ ಮಾತನಾಡಲು ಚರ್ಚೆಗೆ ಕರೆದಿದ್ದೇನೆ

ಶ್ರೀ ಆರ್. ವೆಂಕಟರಾವಯ್ಯ.—ಇದಕ್ಕೆ ನಾನು ಒಪ್ಪುವುದಿಲ್ಲ. ಈ ವಿಚಾರವನ್ನು ಕಡೇ ದಿವಸ ತರುತ್ತಾರೆ. ನಾವು ಹಿಂದಿನ ಅಧಿವೇಶನದಲ್ಲೂ ಕೂಡ ಈ ವಿಚಾರ ಬಂದಾಗ ವಾಕೌಟ್ ಮಾಡಿದ್ದೇವೆ, ಧರಣಿ ಮಾಡಿದ್ದೇವೆ. ಸರ್ಕಾರದವರು ಈ ವಿಚಾರದಲ್ಲಿ ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದಕ್ಕೆ ನಾವು ಒಪ್ಪುವುದಿಲ್ಲ.

(ಶ್ರೀ ವೆಂಕಟರಾಮಯ್ಯ ಮತ್ತು ಮಣಿಯವರು ತಮ್ಮ ಸ್ಥಾನಗಳನ್ನು ಬಿಟ್ಟು ಅಧ್ಯಕ್ಷರ ಮುಂದಿನ ಜಾಗಕ್ಕೆ ಬಂದರು)

೧-೦೦ ಪಿ. ಎಂ,

ಅಧ್ಯಕ್ಷರು.—ವೆಂಕಟರಾಮಯ್ಯನವರೆ, ದಯಮಾಡಿ ತಮ್ಮ ಸೀಟ್‌ನಲ್ಲಿ ಹೋಗಿ ಮಾತನಾಡಿ.

ಶ್ರೀ ವೆಂಕಟರಾಮಯ್ಯ.—ಅಧ್ಯಕ್ಷರೆ, ಈಗ ಅವರು ಏನು ಹೇಳುತ್ತಿದ್ದಾರೆ, ಅದನ್ನು ನಾನು ಒಪ್ಪುವುದಿಲ್ಲ. ಅವರು ಮೂರು ವರ್ಷದಿಂದಲೂ ಇದನ್ನೇ ಹೇಳುತ್ತಿದ್ದಾರೆ. ಇದರಿಂದ ಸುಮಾರು ಹತ್ತು ಲಕ್ಷ ಸಂಸಾರಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ನಾವು ಹೇಳುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಬಗ್ಗೆ ಭಿನ್ನಾಭಿಪ್ರಾಯ ಇದೆ.

ಶ್ರೀ ಆರ್. ವೆಂಕಟರಾವಯ್ಯ.—ಅಂದರಿಕೂ ಮಂಚಿವಾಡು ಅನಂಕುಮ್ ಅಂದ ಹಾಗೆ ಹೇಳುತ್ತಿದ್ದೀರಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ನಿಮ್ಮನ್ನೆಲ್ಲಾ ಕರೆದು ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು.—ಈ ರೀತಿ ನಿಂತುಕೊಂಡು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮ್ಮ ಸೀಟು ಬಿಟ್ಟು ಯಾರು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಪಂಪಾಪತಿ.—ಬಡವರ ಬಗ್ಗೆ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದು ಬೇಡವೇ ?

ಶ್ರೀ ಆರ್. ವೆಂಕಟರಾವಯ್ಯ.—೨೦ ಸಾವಿರ ಜನರನ್ನು ಅರೆಸ್ಟ್ ಮಾಡಿದ್ದಾರೆ. ಒಂದು ಸಾವಿರ ಜನರಿಗೆ ಜೈಲಿಗೆ ಕಳುಹಿಸಿದ್ದಾರೆ.

ಅಧ್ಯಕ್ಷರು.—ನಿಮ್ಮ ಸೀಟಿಗೆ ಹೋಗಿ ಮಾತನಾಡಿ ನಾನು ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗರ್ ಹುಕುಂ ಸಾಗುವಳಿ ಬಗ್ಗೆ ಒಂದು ಸುಗ್ರೀವಾಜ್ಞೆ ತಂದಿದ್ದರು. ಈ ಸದನ ನಡೆಯುತ್ತಿರುವಂತಹ ಸಮಯದಲ್ಲಿ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ಇಲ್ಲಿ ಚರ್ಚೆ ಮಾಡದೇ ಸುಗ್ರೀವಾಜ್ಞೆಯನ್ನು ತಂದಾಗ ಅನೇಕ ಜನ ವಿರೋಧ ಮಾಡಿದರು. ಆಗ ಮಾನ್ಯ ಮುಖ್ಯಮಂತ್ರಿಗಳು ಕಂದಾಯ ಸಚಿವರಾಗಿದ್ದಾಗ ಏನು ಉತ್ತರ ಕೊಟ್ಟರು ಎಂದರೆ ಮುಂದೆ ಸದನ ಸೇರಿದಾಗ ಮೊದಲನೆಯ ದಿವಸವೇ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುತ್ತೇನೆ ಎಂದು ನಮಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಆಶ್ವಾಸನೆ ಬೇಕು ಅನ್‌ಆಥರೈಸ್ಡ್ ಕಲ್ಟಿವೇಷನ್ ಕನ್‌ಫರ್ಮ್ ಮಾಡುವ ಬಗ್ಗೆ ತೀರ್ಮಾನ ಮಾಡುತ್ತೇವೆಂದು ಹೇಳಬೇಕು. ಏಕೆಂದರೆ ಸುಗ್ರೀವಾಜ್ಞೆ ಹೊರಡಿಸಿದವರು ನೀವೇ ಪಾಪಸ್ಸು ಪಡೆದವರು ನೀವೆ.

ಶ್ರೀ ಎಂ. ಎಸ್. ಕೃಷ್ಣನ್. —ಅಧ್ಯಕ್ಷರೆ. ಕಳೆದ ಬಾರಿ ತವಗೆ ಗೊತ್ತಿರುವ ಹಾಗೆ ಈ ವಿಷಯವಲ್ಲಿ ಧರಣ ಮಾಡಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಮುಂದಿನ ಸಾರಿ ಈ ಬಿಲ್ಲನ್ನು ತರುತ್ತೇವೆಂದು ಹೇಳಿದ್ದರು. ಬಿಸಿನೆಸ್ ಅಡ್ವೈಸರಿ ಕಮಿಟಿ ನಡೆಯಿತು ಅದರಲ್ಲಿ ನಾನೂ ಇದ್ದೆ, ತಕ್ಷಣ ನಾವು ಎಲ್ಲರನ್ನೂ ಕರೆಸುತ್ತೇವೆ ನಂತರ ಒಪಿನಿಯನ್ ತೆಗೆದುಕೊಂಡು ಮಾಡುತ್ತೇವೆಂದು ಹೇಳಿದರು. ಆಲ್ಲಿಂದ ಇಲ್ಲಿಯವರೆಗೂ ಇದರ ಬಗ್ಗೆ ಏನೂ ಆಗಲಿಲ್ಲ. ಹಿಂದೆ ನಮ್ಮ ಚಳುವಳಿ ನಡೆದು ೨೦ ಸಾವಿರ ಜನ ಜೈಲಿಗೆ ಹೋಗಿದ್ದಾರೆ, ೫೦ ಸಾವಿರ ಜನರು ಮೆರವಣಿಗೆ ಮಾಡಿದರು ನಮ್ಮದು ಸಿ. ಪಿ. ಎಂ. ಎಲ್ಲಾ ಸೇರಿ. ಹೊಸದುರ್ಗ ಮುತ್ತಿತರ ಕಡೆ ರೈತರು ಜೈಲಿಗೆ ಹೋಗುತ್ತಿದ್ದಾರೆ, ಬಳ್ಳಾರಿ ಕಡೆ ಹೋಗುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಉತ್ತರಬೇಕು. ಇವೊತ್ತೇ ನಮ್ಮನ್ನು ಕರೆದು ಚರ್ಚೆ ಮಾಡಿ ಎಲ್ಲರನ್ನು ಕರೆದು ಇವೊತ್ತೇ ಚರ್ಚೆ ಮಾಡಿ ಯಾವತ್ತು ಬಿಲ್ ಇಟ್ಟುಕೊಳ್ಳಬೇಕೋ ಇಟ್ಟುಕೊಂಡು ಪಾಸ್ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ....ಮಾನ್ಯ ಮುಖ್ಯಮಂತ್ರಿಗಳು ಕಂದಾಯ ಸಚಿವರಾಗಿದ್ದಾಗ ವಿರೋಧಪಕ್ಷದ ನಾಯಕರನ್ನು ಚರ್ಚೆಗೆ ಕರೆದರು ಚರ್ಚೆ ಪೂರ್ಣ ಆಗಲಿಲ್ಲ. ಈಗ ಇದರಲ್ಲಿ ಎರಡು ವಿಷಯಗಳು ಮಾತ್ರ ಬಹಳ ಮುಖ್ಯ ಒಂದು ರೆವಿನ್ಯೂ ಲ್ಯಾಂಡ್ ಅನ್‌ಅಥರೈಸ್ಡ್ ಕಲ್ಟಿವೇಷನ್ ಮಾಡಿರುವುದನ್ನು ಕನ್‌ಫರಮ್ ಮಾಡುವುದು ಎರಡನೆಯದು ಅಂದರೆ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುತ್ತಿರುವುದರಿಂದ ಕಳೆದ ೧೫–೨೦ ವರ್ಷಗಳಿಂದಲೂ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಮಾಡಬೇಕೆಂದು ಹೇಳಿದಾಗ ರೆವಿನ್ಯೂ ಸಚಿವರು ಆಶ್ವಾಸನೆ ಕೊಟ್ಟಿದ್ದರು. ಲಕ್ಷವಂತರ ಎಕರೆ ೫ ಅಂಡ್ ಡಿ ಲ್ಯಾಂಡ್ ಕೊಟ್ಟಿದ್ದೇವೆ. ಅದನ್ನು ಕನ್‌ಸಿಡರ್ ಮಾಡೋಣ, ಚರ್ಚೆ ಮಾಡೋಣ ಎಂದು ಹೇಳಿದ್ದರು. ಅದಕ್ಕೋಸ್ಕರ ಇವೊತ್ತು ವಿರೋಧಪಕ್ಷದ ನಾಯಕರು ಎಲ್ಲಾ ನಾಯಕರು ಕರೆದು ತೀರ್ಮಾನ ಮಾಡಿ ಬಿಲ್ ಇಂಟ್ರಡ್ಯೂಸ್ ಮಾಡಿ ಇದಕ್ಕೆ ಮಾನ್ಯತೆ ಕೊಟ್ಟು ಸಾಗುವಳಿ ಚೀಟಿ ಕೊಡುವುದಕ್ಕೆ ವ್ಯವಸ್ಥೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು. —ವೆಂಕಟರಾಮಯ್ಯನವರು, ತಾವು ಏನು ಹೇಳಬೇಕೆಂದಿದ್ದೀರಿ ಅದನ್ನು ತಮ್ಮ ಸೀಟಿಗೆ ಹೋಗಿ ಹೇಳಿ. ತವಂಗೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ —ಮಾನ್ಯ ಅಧ್ಯಕ್ಷರೆ, ಈ ವಿಷಯ ಬಹಳ ಸೂಕ್ಷ್ಮವಾದುದು. ಅನೇಕ ಅಧಿವೇಶನಗಳಿಂದ ಈ ವಿಚಾರ ಹೀಗೆಯೇ ಬರುತ್ತಿದೆ. ಆದರೆ ಆರ್ಡಿನೆನ್ಸ್ ಇಷ್ಟೂ ಮಾಡಿದರು ನಮ್ಮ ಭಿನ್ನಾಭಿಪ್ರಾಯವಾದರೂ ಇಷ್ಟೆ ಶ್ರೀಮಂತರು ಮತ್ತು ಕಾಫೀ ಪ್ಲಾಂಟರುಗಳು ಏನು ಬಗರ್ ಹುಕುಂ ಅನ್ನು ಮಾಡುತ್ತಿದ್ದಾರೆ ಅದನ್ನು ಸಕ್ರಮಗೊಳಿಸುವುದನ್ನು ಬಿಟ್ಟು ಬಡವರು ಯಾರು ಲಕ್ಷಾಂತರ ಮಂದಿ ಬಗರ್ ಹುಕುಂ ಅನ್ನು ಮಾಡುತ್ತಿದ್ದಾರೆ ಅವರಿಗೆ ಮಾತ್ರ ಸಕ್ರಮಗೊಳಿಸಲಾಗುತ್ತದೆಂದು ಬಡವರಿಗೆ ಮಾತ್ರ ನೀವು ಇದನ್ನು ಸೀಮಿತ ಮಾಡುವುದಾದರೆ ಯಾವುದೇ ಚರ್ಚೆಯಿಲ್ಲದೆ ಇದನ್ನು ನಾವು ಕೇವಲ ಒಂದೇ ದಿವಸದಲ್ಲಿ ಪಾಸ್ ಮಾಡಿಕೊಡುತ್ತೇವೆ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಎಲ್ಲರನ್ನು ಕರೆಯುತ್ತೀರಿ, ಚರ್ಚೆಮಾಡುತ್ತೀರಿ. ಆದರೆ ಇಲ್ಲಿ ತಾವು ಅದೇ ವಿಷಯವನ್ನು ಎಂಡಿಸಿ ಈ ಸದನದ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು ಈ ವಿಚಾರದಲ್ಲಿ ಸರ್ಕಾರ ಯಾವುದೇ ರೀತಿಯ ಭಿನ್ನಾಭಿಪ್ರಾಯವನ್ನೂ ಸೃಷ್ಟಿ ಮಾಡುವುದು ಬೇಡ. ನಾನು ಈಗಾಗಲೇ ಹೇಳಿದಂತೆ ನಮ್ಮ ಭಿನ್ನಾಭಿಪ್ರಾಯ ಇರುವುದಾದರೂ ಇಷ್ಟೆ ಶ್ರೀಮಂತರಿಗೆ, ಕಾಫೀ ಪ್ಲಾಂಟರ್‌ಗಳಿಗೆ ಬಗರ್ ಹುಕುಂ ಅನ್ನು ಸಕ್ರಮಗೊಳಿಸಬೇಕೆಂದು ತಾವು ಏನು ಮಾಡುದೆಯಲ್ಲಿ ಸೇರಿಸಿದ್ದೀರಿ ಅದನ್ನ ತೆಗೆದುಹಾಕಿ ಬಡವರು ಯಾರು ಬಗರ್‌ಹುಕುಂ ಮಾಡುತ್ತಿದ್ದಾರೆ ಅವರಿಗೆ ಮಾತ್ರ ಸಕ್ರಮಗೊಳಿಸಿಕೊಡುತ್ತೇವೆಂದು ಒಂದು ಪುಸ್ತಿಯನ್ನು ಈ ಸದನದಲ್ಲಿ ತಂದರೆ ನಾವು ಅದರ ಬಗ್ಗೆ ಯಾವುದೇ ಚರ್ಚೆಯಿಲ್ಲದೆ ಒಂದೇ ದಿವಸದಲ್ಲಿ ಅದನ್ನು ಪಾಸ್ ಮಾಡಿಕೊಡುತ್ತೇವೆ,

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ವೆಂಕಟಸುಬ್ಬಯ್ಯನವರೇ ತಾವು ಕುಳಿತುಕೊಳ್ಳಿ ತಾವು ಏನು ಮಾತನಾಡ ಬೇಕಾದರೂ ತಮ್ಮ ಸೀಟಿಗೆ ಹೋಗಿ ಮಾತನಾಡಿ. ದಯವಿಟ್ಟು ಅಲ್ಲಿ ಹೋಗಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ವೆಂಕಟರಾವಯ್ಯನವರೇ ತಾವು ಕುಳಿತುಕೊಳ್ಳಿ. ಅಲ್ಲೇ ಕುಳಿತುಕೊಳ್ಳಿ ನಾನು ಹೇಳುತ್ತೇನೆ, ಮಾನ್ಯ ವೀರಪ್ಪಮೊಯಿಲಿಯವರು ಕೇಳಿರತಕ್ಕ ಪ್ರಶ್ನೆಗೆ ನಾನಂ ಉತ್ತರವನ್ನು ಕೊಡಬೇಕಾಗಿದೆ. ಮೊಟ್ಟಮೊದಲನೆಯದಾಗಿ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಮಾನ್ಯ ಮೊಯ್ಲಿಯವರು ಹೇಳಿದ ಪ್ರಕಾರ ಬಗರ್ ಹುಕುಂನ್ನು ಖಾಯಂ ಮಾಡುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಆದರೆ ಈ ಬಿಲ್ಲನ್ನು ತರುವುದಕ್ಕೆ ಮುಂಚಿತವಾಗಿ ವಿರೋಧಪಕ್ಷದ ಎಲ್ಲಾ ನಾಯಕರನ್ನೂ ಕರೆದು ಚರ್ಚೆಮಾಡಿದ್ದೆ. ಮಾನ್ಯ ಬಂಗಾರಪ್ಪನವರೂ ಬಂದಿದ್ದರು. ಅನಂತರ ಈ ಮನೆಯಲ್ಲಿ ಆ ಮಸೂದೆಯನ್ನು ತಂದಾಗ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿದೆವು. ಅದರಲ್ಲಿ ಮಾನ್ಯ ಖಾರ್ಗೆಯವರೂ ಸದಸ್ಯರಾಗಿದ್ದರು. ಇನ್ನು ಬೇರೆ ಬೇರೆಯವರು ಸದಸ್ಯರಾಗಿದ್ದರು ಆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟ್ ಕೂಡ ಯೂನಾನಿಮಸ್ ಆಗಿ ಬಂತು.

ಶ್ರೀ ಎಂ. ಎಸ್. ಕೃಷ್ಣನ್.—ಅದರಲ್ಲಿ ಮಾನ್ಯ ಭೂಪತಿಯವರು ವಿರೋಧ ಮಾಡಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಬೇರೆ ವಿಚಾರ. ಆ ಮಸೂದೆ ಇಲ್ಲಿಗೆ ಬಂದಮೇಲೆ ಕೆಲವು ಭಿನ್ನಾಭಿಪ್ರಾಯಗಳು ಬಂದುವು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾನೂ ಇದ್ದೆ. ಇದರಲ್ಲಿರತಕ್ಕ ೩-೪ ಬಿಲ್ಲುಗಳನ್ನು ಮೊದಲು ಪಾಸ್ ಮಾಡೋಣ. ಆನಂತರ ಲ್ಯಾಂಡ್ ರೆವಿನ್ಯೂ ಆಕ್ಟ್‌ನ ಈ ತಿದ್ದುಪಡಿಯನ್ನು ಚರ್ಚೆ ಮಾಡೋಣ ಎಂದು ಹೇಳಿದ್ದೇ ಇವತ್ತು ಈ ಆರ್ಡಿನೆನ್ಸ್ ಬಿಲ್ ಆದ ಕೂಡಲೇ ಈ ಲ್ಯಾಂಡ್ ರೆವಿನ್ಯೂ ಬಿಲ್‌ನ್ನು ತೆಗೆದುಕೊಳ್ಳೋಣ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ ಈ ಮನೆಯಲ್ಲಿ ಈ ಬಿಲ್ಲನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಿಂತ ಮೊದಲು ಎಲ್ಲರನ್ನೂ ಕರೆದು ಚರ್ಚೆ ಮಾಡುತ್ತೇನೆ; ಅಲ್ಲಿ ಒಮ್ಮತದ ಅಭಿಪ್ರಾಯ ಬಂದರೆ ಇಲ್ಲಿ ಚರ್ಚೆಯಿಲ್ಲದೆ ಪಾಸ್ ಮಾಡಬಹುದು. ನಾನು ನಾಳೆ ಎಲ್ಲಾ ವಿರೋಧಪಕ್ಷಗಳ ಮುಖಂಡರನ್ನೂ ಕರೆಯಲಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದ ಪ್ರಕಾರ ಇಲ್ಲಿ ಸಣ್ಣ ಬಿಲ್ಲುಗಳನ್ನು ಹಾಕಿದ್ದೇವೆ. ಇವು ಪಾಸ್ ಆದಮೇಲೆ ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಬಿಲ್‌ನ್ನು ಹಾಕಿಕೊಳ್ಳಲಿ ನಾಳೆ ಎಲ್ಲರನ್ನೂ ಕರೆಯುತ್ತೇನೆ. ಅಲ್ಲಿ ಒಮ್ಮತದ ಅಭಿಪ್ರಾಯ ಬಂದರೆ ಒಳ್ಳೆಯದು. ಅದು ಬಂದರೆ ಚರ್ಚೆಯಿಲ್ಲದೆ ಇದನ್ನು ಪಾಸ್ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದು ಬೇರೆ ವಿಚಾರ ಆ ಮೇಲೆ ಲ್ಯಾಂಡ್ ರೆವಿನ್ಯೂ ಆಕ್ಟ್‌ರಲ್ಲಿ ಫಾರೆಸ್ಟ್ ಬರುವುದಿಲ್ಲ ಈಗ ಸದನದಲ್ಲಿ ಅದರ ಬಗ್ಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ — ಅರಣ್ಯಾಧಿಕಾರಿಗಳು ಕಿರುಕುಳವನ್ನು ಕೊಡುತ್ತಿದ್ದಾರೆ. ಅದನ್ನಾದರೂ ತಪ್ಪಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅವನ್ನು ತಪ್ಪಿಸೋಣ.

ಒಬ್ಬ ಸದಸ್ಯರು.— ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಜಮೀನು.

ಶ್ರೀ ಎಸ್. ಆರ್. ಬೊಮ್ಮಾಯಿ. — ಎಲ್ಲಾ ಬರುತ್ತದೆ

ಶ್ರೀ ಯು. ಭೂಪತಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಕರೆದು ಚರ್ಚೆ ಮಾತುತ್ತೇವೆಂದು ಹೇಳಿದ್ದಾರೆ. ಮಾನ್ಯ ಸಚಿವರು ಶ್ರೀಮಂತರಿಗೆ ಭೂಮಿಯನ್ನು ಕೊಡುವ ಉದ್ದೇಶವಿಲ್ಲವೆಂದು ಹೇಳಿದ್ದಾರೆ. ಆದರೆ ನಾನು ಆ ಒಂದು ಸಭೆಯಲ್ಲಿ ಭಾಗವಹಿಸಿದ್ದು ಮಾನ್ಯ ಬಂಗಾರಪ್ಪನವರು ಮತ್ತು ನಾನು ಒಂದು ಸ್ಟಾಂಡ್ ತೆಗೆದುಕೊಂಡು ಹೇಳಿದಂಥ ಹಾಗೆ ನೆನಪಿದೆ, ದಯವಿಟ್ಟು ಭೂಮಿಯನ್ನು ಶ್ರೀಮಂತರಿಗೆ ಕೊಡುವುದಕ್ಕಾಗುವುದಿಲ್ಲ. ತಾವು ಯೋಚನೆ ಮಾಡಬೇಕು. ಕಮಿಟಿ ಯುನಾನಿಮಸ್ ಆಗಿ ರಿಪೋರ್ಟ್ ಕೊಟ್ಟಿದೆ ಎನ್ನುವುದನ್ನು ನಾವೂ ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು.— ಮಾನ್ಯ ಭೂಪತಿಯವರೇ ನಾಳೆ ಮೀಟಿಂಗ್ ಕರೆಯುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಯು. ಭೂಪತಿ.— ದಯವಿಟ್ಟು ಕಮಿಟಿಯ ಮೇಲೆ ಹಾಕಬೇಡಿ. ಸರ್ಕಾರದ ಉದ್ದೇಶ ಶೀಘ್ರಾತಿಶೀಘ್ರವಾಗಿ ಕೊಡಬೇಕೆನ್ನುವುದನ್ನು ಒಪ್ಪಿಕೊಂಡಿದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ ಈಗ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಎರಡು ವಿಚಾರಗಳಿರುತ್ತವೆ. ಇದನ್ನು ಇಂದೇ ತೆಗೆದುಕೊಳ್ಳಬೇಕೆಂದರೆ ನಾವು ಸಿದ್ಧರಿದ್ದೇವೆ. ನಾವು ತಿಳಿದುಕೊಂಡಿರುವುದೇನೆಂದರೆ ಮಾನ್ಯ ಕೃಷ್ಣನ್‌ರವರು ಮೆನ್‌ಷನ್ ಮಾಡುತ್ತಾರೆ. ಇದನ್ನು ಇವತ್ತೇ ತೆಗೆದುಕೊಳ್ಳಬೇಕೆಂದು. ನಾನು ಅವರನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಒಂದು ಸಲ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಪ್ರಿವಿಲಿಜಿನರಿ ಸಬ್‌ಮಿಷನ್ ಬಂದರೆ ಅದಕ್ಕೆ ಉತ್ತರ ಇವತ್ತೇ ಬಂಬೇಕಾಗುತ್ತದೆ. ಇವತ್ತೇ ನಾವು ತೆಗೆದುಕೊಳ್ಳುವುದಾದರೆ ಇವತ್ತೇ ರಿಪ್ಲೈ ಕೊಡಲು ತಯಾರಾಗಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೇ ನನ್ನನ್ನು ಕರೆಯಿಸಿ ಕೇಳಿದ ಮೇಲೆ ನನಗೆ ತಿಳಿದ ಪಂಟ್ಟಿಗೆ ನಾಳೆ ದಿವಸ ಶ್ರೀಮಾನ್ ಹೆಗಡೆಯವರು ಬರುತ್ತಾರೆ, ಅವರ ಎದುರಿಗೆ ಇದು ಚರ್ಚೆಯಾಗಲಿ. ಆವಾಗ ನಮ್ಮ ಸಬ್‌ಮಿಷನ್ ಏನು ಇದೆ ಅದನ್ನು ಹೇಳುಹುದು. ನಾಳೆ ದಿವಸ ಬರಲಿ ಚರ್ಚೆ ಮಾಡೋಣವೆಂದು ಹಾಗೆ ಹೇಳಿದ್ದಕ್ಕೆ ನನ್ನನ್ನು ಮಾನ್ಯ ಮೊಯಿಲಿಯವರನ್ನು ಮಾನ್ಯ ಕೆ. ಹೆಚ್. ಪಾಟೀಲ್‌ರನ್ನು, ಮಾನ್ಯ ಕೃಷ್ಣನ್‌ರವರನ್ನು ಕರೆಸಿದ್ದಿರಿ. ಆವರೆ ಮಾನ್ಯ ಕೃಷ್ಣನ್‌ರವರು ಬರಲಿಲ್ಲ.

ಶ್ರೀ ಎಸ್, ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ ಇವತ್ತೇ ಚರ್ಚೆ ಪ್ರಾರಂಭ ಮಾಡಿದರೆ ಇವತ್ತೇ ಉತ್ತರವನ್ನು ಕೊಡುತ್ತೇವೆ. ನನ್ನ ರಿಕ್ವೆಸ್ಟ್ ಏನೆಂದರೆ ನಾಳೆ ತೆಗೆದುಕೊಂಡರೆ ಒಳ್ಳೆಯದು. ಏತಕ್ಕೆಂದರೆ ಶ್ರೀಮಾನ್ ಹೆಗಡೆಯವರು ನಾಳೆ ಸಭೆಯಲ್ಲಿ ಇರುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾಳೆ ಅವರು ಬರಲಿ, ನಾಳೆ ಚರ್ಚೆ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾಳೆ ಅಡ್ಜರ್ನ್‌ಮೆಂಟ್ ಮೋಷನ್ ಇರಲಿ, ಪ್ರಿವಿಲೇಜ್ ಇರಲಿ ನಾಳೆ ತೆಗೆದುಕೊಳ್ಳೋಣ.

ಶ್ರೀ ಎ. ಲಕ್ಷ್ಮೀಸಾಗರ್.— ನೋಟೀಸ್ ಕೊಟ್ಟಿದ್ದರೆ ಅದನ್ನು ನಾಳೆ ತೆಗೆದುಕೊಳ್ಳಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಈಗ ಎಲ್ಲಾ ವಿಷಯಗಳನ್ನು ಜಾಯಿಂಟ್ ಆಗಿ ತೆಗೆದು ಕೊಳ್ಳುತ್ತೇವೆಂದು ಹೇಳುವುದು ಸರಿಯೇ ಅವರು ಪ್ರಿವಿಲೇಜ್ ಮೋಷನ್ ಆಗಿ ರೈಸ್ ಮಾಡಿದರು. ಮತ್ತೆ ಅದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಂಡರೆ ಅವರ ಮಹತ್ವ ಹೋಗಿ ಬಿಡುತ್ತದೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇದನ್ನು ತಡಯುವುದಕ್ಕಾಗುವುದಿಲ್ಲವೇ. ಮಾನ್ಯ ಲಕ್ಷ್ಮೀಸಾಗರ್‌ರವರು ಎಲ್ಲರಿಗೂ ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ ಒಂದು ವಿಷಯ ಮತ್ತೆ ಬಂದಿದೆ. ಅದೇನೆಂದರೆ ಈಗ ಪ್ರಿವಿಲೇಜ್ ಮತ್ತು ಅಡ್ಜರ್ನ್‌ಮೆಂಟ್ ಮೋಷನ್ ಎರಡನ್ನು ಒಟ್ಟಿಗೆ ತೆಗೆದು ಕೊಳ್ಳೋಣವೆಂದು ತಾವು ಹೇಳಿದಿರಿ. ಅವಕ್ಕೆ ಮಾನ್ಯ ಖಾರ್ಗೆಯವರು ಹೇಳಿದರು ರೂಲ್ ಟರ್‌ರಲ್ಲಿ ಏನಾಗುತ್ತದೆಂದರೆ ರಾಜಕೀಯ ವಿಷಯಗಳು ಬರಬಹುದು ಮತ್ತೆ ಕೆಲವು ವೈಯಕ್ತಿಕ ಸಮಸ್ಯೆಗಳು ಬರಬಹುದು. ಅವೆಲ್ಲವನ್ನು ಆಂಟಿಸಿಪೇಟ್ ಮಾಡುವುದಿಲ್ಲ. ಅವರ ತಪ್ಪು ಇವರ ತಪ್ಪು ಎಂದು ಅಲ್ಲ. ನಮ್ಮದು ಬಹಳ ಸೀಮಿತ ವಿಷಯ. ಪ್ರಿವಿಲೇಜ್ ಕಮಿಟಿಗೆ ಕಳುಹಿಸುವುದಕ್ಕೆ ನಾನು ನಿಮ್ಮನ್ನು ಕನ್‌ವಿನ್ಸ್ ಮಾತಬೇಕು. ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ವೈಡರ್ ಸೆಂಪ್ ಇದೆ. ಆದ್ದರಿಂದ ಅದನ್ನು ಬೇರೆ ಚರ್ಚೆ ಮಾಡೋಣ.

ಅಧ್ಯಕ್ಷರು,— ನಿಮ್ಮದು ಮತ್ತು ಅವರದ್ದು ಕೂಡಿ ಒಂದೇ ದಿವಸ ಆಗಲಿ. ನಿಮ್ಮದು. ಪ್ರಿವಿಲೇಜ್ ಮೋಷನ್, ಅವರದ್ದು ಅಡ್ಜರ್ನ್‌ಮೆಂಟ್ ಮೋಷನ್, ಎರಡನ್ನೂ ನಾಳೆ ತೆಗೆದಂ ಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.— ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೃಷ್ಣನ್‌ರವರು ಹೇಳುವುದು ಸರಿ ಇಡಿ. ಅಡ್ಜರ್ನ್‌ಮೆಂಟ್ ಮೋಷನ್ ಚರ್ಚೆ ಆಗುವಾಗ ಪ್ರಿವಿಲೇಜ್ ಇಶ್ಯೂವನ್ನು ಎತ್ತಲಿ, ಅದಕ್ಕೂ ಉತ್ತರಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ನಿಯಮ ಏನಿದೆ ಅಂದರೆ ಪ್ರಿವಿಲೇಜ್ ನೋಟೀಸ್ ಅನ್ನು ಬೇರೆ ಬಿಸಿನೆಸ್‌ಗೆ ಹೋಗುವ ಮೊದಲು ಎತ್ತಬೇಕೆಂದು ಇದೆ. ಆ ಪ್ರಕಾರ ಕೃಷ್ಣನ್‌ರವರು ಕೇಳುತ್ತಿದ್ದಾರೆ. ಇಲ್ಲಿ ಅದನ್ನು ಕನ್‌ವಿನ್ಸ್ ಮಾಡುವ ಬಗ್ಗೆ ಮತ್ತು ಮಾತನಾಡತಕ್ಕದ್ದರ ಬಗ್ಗೆ ಕೆಲವು ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿದ್ದೇವೆ. ಅದೇನೆಂದರೆ, ಯಾರಿಗೆ ಪ್ರಿವಿಲೇಜ್ ಮೋಷನ್ ಸಂಬಂಧಪಟ್ಟಿದೆ ಆ ಮಂತ್ರಿಗಳಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಸದಸ್ಯರಾಗಲಿ ಇಲ್ಲಿರ ಬೇಕಾಗುತ್ತದೆ. It is directed against the Ex-Chief Minister. The rule has been complied with. The question is that it should be taken up for consideration. we will not be fair to the hon. Member if we take up the matter in the absence of the hon. Member. We said that it could be taken up tomorrow in his presence. ಅದಕ್ಕೆ ಸಂಬಂಧಪಟ್ಟ ಸದಸ್ಯರು ಈಗ ಇಲ್ಲಿ ಇಲ್ಲ. ಅವರು ಬಂದ ಮೇಲೆ ಅವರ ಎದುರುಗಡೆಯೇ ಇದು ಮಾತನಾಡಬೇಕಾಗುತ್ತದೆ. That is why we said that we will take it up tommorrow. ಪ್ರಿವಿಲೇಜ್ ಮೋಷನ್ ಅವರಿಗೆ ವೈಯಕ್ತಿಕವಾಗಿ ಸಂಬಂಧಪಟ್ಟಿದೆ. ಇದು ವಿಶೇಷವಾಗಿರುವುದರಿಂದ ಇದರ ಬಗ್ಗೆ ಈಗ ಪ್ರಿಲಿಮಿನರಿಯಾಗಿಯಾಗಲಿ ಅಥವಾ ಸಂಪೂರ್ಣವಾಗಿಯಾಗಲಿ ಚರ್ಚೆ ಮಾಡತಕ್ಕದ್ದು ಸರಿಯಲ್ಲ.

SRI U. BHUPATHY.—It is after all going to be referred to the Privilege Committee. Why his presence is required to discuss the Privilege Motion? ಅವರೇನು ಉತ್ತರ ಕೊಡುವ ಹಾಗೆ ಇಲ್ಲವಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮೊಯ್ಲಿಯವರ ವಾದವನ್ನು ನಾ ಕೇಳಿದೆ. ಪ್ರಿವಿಲೇಜಸ್ ರೂಲ್ಸ್ ಪ್ರಕಾರ.....ಅದನ್ನು ಸ್ವಲ್ಪ ಓದಿಬಿಡುತ್ತೇನೆ, ಕೇಳಿ.

Rule 193 reads thus:

> "The Speaker if he gives consent under rule 190 and holds that the matter proposed to be discussed is in order, shall after the questions and before the list of business in entered upon, call the member concered who shall raise in his place and while asking for leave to raise the question of privilege make a short statement relevant thereto."

This is what I am seeking to-day. Further the proviso reads thus:

> "Provided that where the Speaker has refused his consent under rule 190 or is of opinion that the matter proposed to be discussed is not in oredr, he may, if he thinks it necessary read the notice of question of privilege and state that he refuses consent or holds that the notice of question of privilege is not in order."

That problem has not arisen. Further,

> "Provided further that the Speaker may, if he is satisfied about the urgency of the matter, allow a question of privilege to be raised at any time during the course of a sitting after the disposal of question."

This is the way in which it is to be done. ಆದನ್ನೇ ನಾನು ತಮ್ಮನ್ನು ಕೇಳುತ್ತಿರುವುದು. ಹತ್ತು ಜನ ಎದ್ದು ನಿಂತಾಗ ಇದು ಪ್ರಿವಿಲೇಜ್ ಕಮಿಟಿಗೆ ಹೋಗುತ್ತದೆಂದು ಇದೆ. I do not want to open the whole gamut of telephone tapping. It is a huge thing. There is a political question, the administrative matter, the scope and the personalities involved. ಟೆಲಿಫೋನ್ ಟ್ಯಾಪಿಂಗ್ ವಿಷಯಕ್ಕೆ ಬಂದರೆ ಬಹಳ ದೊಡ್ಡ ಕಡತ ಇದೆ. ಪೊಲಿಟಿಕಲ್ ಕೊಶ್ಚನ್ಸ್ ಬರುತ್ತವೆ, ಅಡ್ಮಿನಿಸ್ಟ್ರೇಟೀವ್ ಮ್ಯಾಟರ್ಸ್ ಬರುತ್ತವೆ, ನನ್ನದು ಸೀಮಿತ ವಿಷಯ. ಪ್ರಿವಿಲೆಜ್ ಕಮಿಟಿಗೆ ಕಳುಹಿಸಬೇಕೆಂಬುದಕ್ಕೆ ಕನ್‌ವಿನ್ಸ್ ಮಾಡಬೇಕಾಗಿದೆ. ತಮ್ಮ ಅಭಿಪ್ರಾಯ ಏನು ಬೇಕಾದರೂ ಕೊಡಿ. ಇದರ ಬಗ್ಗೆ ಏನು ತೀರ್ಪು ಕೊಡುತ್ತಾರೋ ಕೊಡಲಿ. ನಾಳೆ ಅಡ್ಜರ್ನ್‌ಮೆಂಟ್ ಮೋಷನ್ ಬಂದಾಗ ನಾನು ಕೂಡ ಮಾತನಾಡಬೇಕಾಗುತ್ತದೆ. ಎಲ್ಲವನ್ನು ಮಾತನಾಡಿ, ಇದನ್ನು ಮಾತನಾಡಿದರೆ ಪ್ರಿವಿಲೇಜ್ ಕಮಿಟಿಗೆ ಹೋಗುವ ಪ್ರಶ್ನೆ ಬರುವುದಿಲ್ಲ. It is another matter. This whole thing has to be separately discussed. ಮೊದಲೇ ತೀರ್ಮಾನ ಮಾಡಿದರೆ ನಾನು ಏನು ಮಾಡಲಿ. ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದರೆ ಏನೂ ಮಾಡುವುದಕ್ಕಾಗುವುದಿಲ್ಲ. Everything gets clouded. The whole thing gets lapsed. If you have already made up your mind I cannot help. But, let the people know what is happening is correct or not. Personalities are not so important There are some rulings of the Lok Sabha. There are rulings of the British House of Commons in this record. ಅವೆಲ್ಲಾ ಇದೆ. ನಾವೆಲ್ಲಾ ಚರ್ಚೆ ಮಾಡಿಕೊಂಡು ಬಂದಿದ್ದೇವೆ. ಅದನ್ನು ಅಡ್ಜರ್ನ್‌ಮೆಂಟ್ ಮೋಷನ್ ಜೊತೆ ಸೇರಿಸುವುದಕ್ಕಾಗುವುದಿಲ್ಲ. ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಆದ್ದರಿಂದ ದಯವಿಟ್ಟು ಆಲೋಚನೆ ಮಾಡಿ ಇವತ್ತಿನ ದಿವಸ ಪ್ರಿವಿಲೇಜ್ ವಿಚಾರವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. Let me speak about it. Let him give his considered opinion.

ಅಧ್ಯಕ್ಷರು.—ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕೃಷ್ಣನ್ ಅವರು ಹೇಳಿದಹಾಗೆ ಅಡ್ಜರ್ನ್‌ಮೆಂಟ್ ಮೋಷನ್ ಬೇರೆ, ಪ್ರಿವಿಲೇಜ್ ಮೋಷನ್ ಬೇರೆ. ಅಡ್ಜರ್ನ್‌ಮೆಂಟ್ ಮೋಷನ್ ಆದಮೇಲೆ ಕೃಷ್ಣನ್ ಅವರ ಪ್ರಿವಿಲೇಜ್ ಮೋಷನ್‌ನನ್ನು ಸಪರೇಟಾಗಿ ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಇವರ ಅಡ್ಜರ್ನ್‌ಮೆಂಟ್ ಮೋಷನ್ ಮುಗಿದ ಕೂಡಲೆ ಸಪರೇಟಾಗಿ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾವಪ್ಪ —ಅಧ್ಯಕ್ಷರೇ, ನನ್ನದೂ ಒಂದು ಮೋಷನ್ ಇದೆ. ಅದನ್ನೂ ನಾಳೆ ತೆಗೆದುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾಳೆ ಮಾಡುವ ಕೆಲಸವನ್ನು ಇವತ್ತೇ ಮಾಡಿ. ಇವತ್ತು ೧೫ ನಿಮಿಷ ಚರ್ಚೆ ಮಾಡುವುದಕ್ಕೆ ಏನು ಕಷ್ಟ ? ನಾನು ನಿನ್ನೆ ಅವಕಾಶ ಕೊಟ್ಟಿದ್ದೇನೆ. ಅದನ್ನು ಇವತ್ತು ಎಂದು ಹೇಳಿದರು. ಇವತ್ತು ನಾಳೆ ಎಂದು ಹೇಳುತ್ತಿದ್ದಿರಿ. ಹೀಗಾದರೆ ಕಷ್ಟ ಆಗುತ್ತದೆ.

ಅಧ್ಯಕ್ಷರು.—ಕೃಷ್ಣನ್ ಅವರೇ, ದಯವಿಟ್ಟು ಕುಳಿತುಕೊಳ್ಳಿ, ನಾಳೆ ತೆಗೆದುಕೊಳ್ಳೋಣ. ನಾಳೆ ತಪ್ಪಿಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಿವಿಲೇಜ್ ಮೋಷನ್ ತೆಗೆದುಕೊಂಡು ಮಾನ್ಯ ರಾಮಕೃಷ್ಣ ಹೆಗಡೆಯವರಿರಬೇಕು ಎಂದು ಹೇಳಿದರು. ಅವರಿದ್ದರೆ ತೊಂದರೆ ಇಲ್ಲ. ಆದರೆ ಇಲ್ಲಿ ಯಾರೆ ಪ್ರಿವಿಲೇಜ್ ಕರ್ಟೈಲ್ ಆಗಿದೆ ಎಂಬುದನ್ನು ಪ್ರಿವಿಲೇಜ್ ಕಮಿಟಿ ತೀರ್ಮಾನ ಮಾಡಬೇಕು. ಹೆಗಡೆಯವರು ಇರಬೇಕು ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅವರನ್ನು ಕೇಳಲೂ ಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೇ ಕೇಳಿ ತೀರ್ಮಾನ ಮಾಡಬಹುದು. ಇವತ್ತೇ ಚರ್ಚೆ ಮಾಡುವುದಕ್ಕೆ ಏನು ಕಷ್ಟ ಹೇಳಿ.

ಅಧ್ಯಕ್ಷರು.— ನಾಳೆ ತೆಗೆದುಕೊಳ್ಳೋಣ. ಇವರದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿಯಾದರೂ ತೆಗೆದುಕೊಳ್ಳೋಣ ಅಥವಾ ರೂಲ್ ೬೮ ಪ್ರಕಾರ ಬೇಕಾದರೂ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಜರ್ನ್‌ಮೆಂಟ್ ಮೋಷನ್ ಆಗಿಯೇ ತೆಗೆದುಕೊಳ್ಳಿ. ಹಾಗೆಯೇ ಅವರ ಪ್ರಿವಿಲೇಜ್ ಮೋಷನ್ನೂ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಯಿತು. ಈಗ ಗಮನ ಸೆಳೆಯುವ ಸೂಚನೆ. ಎಂ. ಎಸ್. ಕೃಷ್ಣನ್ ಅವರ ಗಮನ ಸೆಳೆಯುವ ಸೂಚನೆ,

ಶ್ರೀ ಎ. ಲಕ್ಷ್ಮೀಸಾಗರ್.— ಅಧ್ಯಕ್ಷರೇ, ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರತ್ಯೇಕವಾದ ಸಮಯಾವಕಾಶವನ್ನು ಗೊತ್ತು ಮಾಡಬೇಕೆಂದು ಈಗಾಗಲೇ ಹೇಳಿದ್ದೇವೆ. ಮತ್ತು ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವ ಮನವಿಯ ಪ್ರತಿಯನ್ನು ಎಲ್ಲಾ ಸದಸ್ಯರಿಗೂ ಕೊಡಬೇಕೆಂದಿದ್ದೇವೆ. ನಿಮ್ಮ ಸೂಚನೆಯಲ್ಲಿ ರಾಜ್ಯದ ಹಾಗೂ ಬೆಂಗಳೂರು ನಗರದ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಆಂಶಿಯಿಂದ ರಾಜ್ಯದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಆದ ಹಾನಿಯ ಬಗ್ಗೆ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ನಾಳೆ ಚರ್ಚೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾಳೆ ಚರ್ಚೆಗೆ ಅವಕಾಶ ಮಾಡಿಕೊಡೋಣ.

ಶ್ರೀ ಆರ್. ವೆಂಕಟರಾಮಯ್ಯ.— ನಾವು ಕೊಟ್ಟಿರುವುದು ಕಾಲ್ ಅಟೆನ್‌ಷನ್ ನೋಟೀಸ್. ನಾಳೆ ಬರುವ ವಿಚಾರಕ್ಕೆ ದೊಡ್ಡ ಸ್ಕೋಪ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆ ಚರ್ಚೆ ಮಾಡಬಹುದು. ಇವತ್ತು ಮಾಡಿದರೆ ಆಷ್ಟು ಪೂರ್ಣವಾಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಯಾವತ್ತು ಪೂರ್ಣವಾಗಿ ಹೇಳುತ್ತೀರಿ ? ಎಲ್ಲಾ ಪೀಸ್ ಆಗಿಯೇ ಹೇಳುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ಯಾವುದನ್ನೂ ಪೂರ್ಣವಾಗಿ ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ದೊಡ್ಡ ಮನಸ್ಸು ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಿರಿ. ಸಂತೋಷ,

ಶ್ರೀ ಎ. ಲಕ್ಷ್ಮೀಸಾಗರ್.— ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಮೆಮೊರ್ಯಾಂಡಮ್‌ನಲ್ಲಿ ಪೂರ್ಣವಾದ ವಿವರಗಳಿವೆ. ಅದರ ಹಿನ್ನೆಲೆಯಲ್ಲಿ ಪ್ರಸ್ತಾಪ ಮಾಡಿದರೆ ಒಳ್ಳೆಯದು ಎಂದು ಸಲಹೆ ಕೊಟ್ಟಿದ್ದೇನೆ.